Agriculture as one of the electives has been cancelled by the University. Again we are given to understand that no such decision has been taken by the Education Department. However, we are pressing the Education Department to hand over these lands to the Agriculture Department.

ಶ್ರೀ ಎನ್. ಎ. ಜನ್ನೇಗೌಡ.—ಈ ಕ್ಷೇತ್ರದ ವಿಸ್ತರಣೆ ಎಷ್ಟು? ಈ ಕ್ಷೇತ್ರ ಬೀಜಾವ್ಯಧ್ದಿಗೆ ಫಲವತ್ತಾಗಿದೆ ಎಂದು ವ್ಯವಸಾಯದ ಇಲಾಖೆಯವರು ಇದನ್ನು ತಮ್ಮ ವಶಕ್ಕೆ ತಗೆದುಕೊಳ್ಳ ಬೇಕೆಂದು ಅಪ್ಲಿಕೇಷನ್ ಏನಾದರೂ ಕೊಟ್ಟಿದ್ದಾರೆಯೇ?

Sri D. B. PAWAR.—In fact, our Deputy Director of Agriculture from Tumkur has made this move, to take over these lands to the Agriculture Department.

Mr. SPEAKER.—Now that all the questions in the list are over, I shall call again the questions of those members who were absent when, they were called before. But I find the hon. Members are still absent, I pass on to the short notice question.

SHORT NOTICE QUESTION AND ANSWER

Setting up a Committee to review the Centre-State relationship

95. Sri L. SRIKANTAIAH (Nanjangud).—

Will the Chief Minister be pleased to state :—

(*a*) whether it is a fact that the Government is setting up a Committee for an examination and review of the Centre-State relationships;

(*b*) if so, the terms of reference to the Committee;

(*c*) whether they would consider the feasibility of a discussion in the House before the terms of reference are finalised?

Sri VEERENDRA PATIL (Chief Minister).—

(*a*) No.

(*b*) Does not arise.

(*c*) Does not arise.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ನಮ್ಮ ರಾಜ್ಯಕ್ಕೆ ನ್ಯಾಯವಾಗಿ ಸಲ್ಲಬೇಕಾದ ಪ್ರಾಜೆಕ್ಟ್‌ಗಳಿಗೆ ಬೇಕಾದಂಥ ರೆವೆನ್ಯೂ ಮತ್ತು ಕ್ಲಿಯರೆನ್ಸ್ ಇವುಗಳಿಗೆ ಕೇಂದ್ರ ಸರ್ಕಾರದವರು ಕೊಡತಕ್ಕಂಥ ತೊಂದರೆಗಳನ್ನು ಪರಿಹರಿಸಿಕೊಳ್ಳುವುದಕ್ಕೆ ಕೂಡತೇ ಕೇಂದ್ರ ಹಾಗೂ ರಾಜ್ಯಗಳ ಸಂಬಂಧಗಳನ್ನು ಪರಿಶೀಲಿಸಿ ಪುನರ್‌ವಿಮರ್ಶಿಸುವ ಬಗ್ಗೆ ಸರ್ಕಾರದವರು ಒಂದು ಸಮಿತಿಯನ್ನು ರಚಿಸುವುದು ಅಗತ್ಯವಲ್ಲವೇ?

† ಶ್ರೀ ವೀರೇಂದ್ರ ಪಾಟೀಲ್.—ಸಮಿತಿಯನ್ನು ರಚಿಸಬೇಕಾಗಿದ್ದರೆ ಕೇಂದ್ರಸರ್ಕಾರದವರು ಮಾಡಬೇಕೇ ವಿನಃ ರಾಜ್ಯ ಸರ್ಕಾರದವರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕೇಂದ್ರ ಮತ್ತು ರಾಜ್ಯಗಳ ಸಂಬಂಧ ಸರಿಯಾಗಿಲ್ಲ. ಅನೇಕ ರೀತಿಯಲ್ಲಿ ನಮ್ಮ ರಾಜ್ಯಕ್ಕೆ ಬರಬೇಕಾದ ಅನುಕೂಲತೆಗಳು ಬರುತ್ತಾ ಇಲ್ಲ. ಇದರ ಬಗ್ಗೆ ತಾವೂ ಕೂಡ ಆಗಿಂದಾಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಆದುದರಿಂದ ಈ ವಿಚಾರದಲ್ಲಿ ತಾವು ಮತ್ತು ಕೇರಳದ ಮುಖ್ಯ ಮಂತ್ರಿಗಳು ಪರ್ಮನೆಂಟ್ ಕೌನ್ಸಿಲ್ ಒಂದು ಇರಬೇಕೆಂದು ಏನು ಒಂದು ನಜೆಷನ್ ಕೊಟ್ಟಿದ್ದೀರೋ ಅದನ್ನು ಸರ್ಕಾರ ಯೋಚನೆ ಮಾಡಿದೆಯೇ? ಅದರ ಬಗ್ಗೆ ತಮ್ಮ ಅಭಿಪ್ರಾಯ ಏನು?

ಶ್ರೀ ವೀರೇಂದ್ರ ಪಾಟೀಲ್.—ಇದು ನ್ಯಾಷನಲ್ ಇಂಟಿಗ್ರೇಷನ್ ಕಮಿಟಿ ಮುಂದೆ ಚರ್ಚೆ ಮಾಡಬೇಕು ಎಂದು ನಿರ್ಧಾರ ಮಾಡಿರುವುದನ್ನು ಪತ್ರಿಕೆಯಲ್ಲಿ ನೋಡಿದ್ದೇನೆ. ಆದುದರಿಂದ ಈ ವಿಷಯ ಆ ಕಮಿಟಿ ಮುಂದೆ ಬಂದಾಗ ನಮ್ಮ ಅಭಿಪ್ರಾಯವನ್ನೂ ಕೂಡ ವ್ಯಕ್ತ ಮಾಡುತ್ತೇವೆ.

2-00 P.M.

ಶ್ರೀ ಎಚ್. ಎನ್. ನಂಜೇಗೌಡ.—ಕೇಂದ್ರ ರಾಜ್ಯಗಳ ಸಂಬಂಧದಲ್ಲಿ ನಮ್ಮ ರಾಜ್ಯಕ್ಕೆ ತೊಂದರೆಯಾಗುತ್ತಿರುವುದರಿಂದ ಒಂದು ಸಮಿತಿಯನ್ನು ನೇಮಕ ಮಾಡಬೇಕು ಎನ್ನುವುದನ್ನು ರಾಜ್ಯ ಸರ್ಕಾರ ತಿಳಿಸಿದೆಯೇ ಅಥವಾ ಅದಕ್ಕೆ ಬದಲಾಗಿ ತೊಂದರೆಗಳನ್ನು ಪರಿಹರಿಸಬೇಕು, ನಮಗೂ ನ್ಯಾಯ ದೊರಕಿಸಿ ಕೊಡಬೇಕು ಎಂದು ಬೇರೆ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಈ ರೀತಿಯಿಂದ ನಮಗೆ ಯಾವ ತರಹ ಕಮ್ಯೂನಿಕೇಷನ್ನೂ ಬಂದಿಲ್ಲ. ಕೇಂದ್ರದಲ್ಲಿ ನಮ್ಮ ಯಾವುದಾದರೂ ಕೆಲಸ ಎಂತು ಹೋಗಿದ್ದರೆ ಪತ್ರ ವ್ಯವಹಾರ ಮಾಡಿ ಮತ್ತು ಡೆಲ್ಲಿಗೆ ಹೋದಾಗ ಖುದ್ದಾಗಿ ಚರ್ಚೆ ಮಾಡಿ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕೇಂದ್ರ ರಾಜ್ಯಗಳ ಸಂಬಂಧದಲ್ಲಿ ಎರಡನೇ ರಾಜ್ಯದ ಮುಖ್ಯ ಮಂತ್ರಿಗಳು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಅವರ ಅಭಿಪ್ರಾಯಗಳನ್ನು ವ್ಯಕ್ತ ಮಾಡುತ್ತಿದ್ದಾರೆ, ಅದಕ್ಕಾಗಿ ಸ್ಟ್ಯಾಂಡಿಂಗ್ ಕಮಿಟಿಯಲ್ಲಿ ಈ ವಿಷಯ ಚರ್ಚೆಗೆ ಬಂದಿತ್ತು ಎಂದು ಕೇಳಿದ್ದೇನೆ. ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನಲ್ಲಿ ಚರ್ಚೆ ಮಾಡಬೇಕೆಂದು ಈ ವಿಷಯವನ್ನು ಇಟ್ಟುಕೊಂಡಿದ್ದಾರೆಂದು ಪತ್ರಿಕಾ ವರದಿಯಿಂದ ಗೊತ್ತಾಗಿದೆ. ಅಫಿಷಿಯಲ್ ಕಮ್ಯೂನಿಕೇಷನ್ ಬಂದಿಲ್ಲ.

ಶ್ರೀ ಎನ್. ಎ. ಚನ್ನೇ ಗೌಡ.—ಕೇಂದ್ರ ಸರ್ಕಾರದವರು ನಮ್ಮ ರಾಜ್ಯ ಸರ್ಕಾರಕ್ಕೆ ಕೊಡಬೇಕಾದ ಸಹಾಯವನ್ನು ಸಾಕಷ್ಟು ಪ್ರಮಾಣದಲ್ಲಿ ಕೊಡುತ್ತಿಲ್ಲ, ಮತ್ತು ಬೇರೆ ರಾಜ್ಯಗಳಿಗಿಂತ ಕಡಿಮೆ ಕೊಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಇದರ ಬಗ್ಗೆ ತಮ್ಮ ಅಭಿಪ್ರಾಯವಾದರೂ ಏನು?

ಶ್ರೀ ವೀರೇಂದ್ರ ಪಾಟೀಲ್.—ಕೇಂದ್ರದವರು ಯಾವರೀತಿಯ ಸಹಾಯವನ್ನು ಪ್ಲಾನ್‌ನಲ್ಲಿ ಕೊಡಬೇಕು ಎನ್ನುವುದಕ್ಕೆ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮತ್ತು ಪ್ಲಾನಿಂಗ್ ಕಮಿಷನ್‌ನಲ್ಲಿ ಚರ್ಚೆಯಾಗುತ್ತದೆ. ಹೀಗೆ ಚರ್ಚೆಯಾದನಂತರ ಕೆಲವು ಗೈಡ್ ಲೈನ್ ಪ್ರಿನ್ಸಿಪಲ್ಸ್ ಹಾಕಿ ಕೊಂಡು ಸಹಾಯ ಮಾಡುತ್ತಾರೆ.

ಶ್ರೀ ಎಸ್. ಶಿವಪ್ಪ.—ಕೇಂದ್ರ ಮತ್ತು ರಾಜ್ಯಗಳ ಸಂಬಂಧದ ವಿಚಾರವಾಗಿ ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನಲ್ಲಿ ಚರ್ಚೆಗೆ ಬರಬಹುದು ಎಂದು ಹೇಳಿದ್ದಾರೆ. ವಿವಿಧ ಭಾಗಗಳಲ್ಲಿ ಕೇಂದ್ರ ಮತ್ತು ವಿವಿಧ ರಾಜ್ಯ ಸರ್ಕಾರಗಳಲ್ಲಿ ಒಂದೇ ಸಮನಾದ ಭಾವನೆ ಬರುವಂಥ ಪ್ರಯತ್ನಗಳಿಲ್ಲದೆ ಇರುವುದರಿಂದ ಹೊಸ ವಿಚಾರ ಕಾಂತಿ ಮೂಡತಕ್ಕಕಾಲ ಬಂದಿದೆ. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಚರ್ಚೆ ಮಾಡತಕ್ಕ ಕಾಲದರ್ಶಿದರೂ ಈ ದೇಶದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ ಹೇಗೆ ಇರಬೇಕು ಎನ್ನುವುದರ ಬಗ್ಗೆ ನಿಮ್ಮ ನಲಹೆಯನ್ನು ಕೊಡುವುದಕ್ಕೆ, ರಾಜ್ಯದ ಹಿತಗಳನ್ನು ಸಾಧನೆ ಮಾಡುವುದಕ್ಕೆ ಒಂದು ಕಮಿಟಿಯನ್ನು ಮಾಡುವುದು ಒಳ್ಳೆಯದಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ರಾಜ್ಯದಲ್ಲಿ ಕಮಿಟಿ ಮಾಡುವುದರಿಂದ ಏನೂ ಸಹಾಯವಾಗುವುದಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಂಬಂಧ ಯಾವರೀತಿ ಇರಬೇಕು ಎಂದು ಕೇಂದ್ರ ಸರ್ಕಾರ ವಿಚಾರ ಮಾಡಬೇಕಾಗುತ್ತದೆ. ಅದಕ್ಕಾಗಿ ಒಂದು ಅವಕಾಶವನ್ನು ಕಲ್ಪಿಸಿ ಕೊಡಬೇಕು ಎನ್ನುವ ವಿಚಾರ ಕೇಂದ್ರಕ್ಕೆ ಇದ್ದ ಹಾಗೆ ಕಾಣಿಸುತ್ತದೆ. ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನಲ್ಲಿ ಬಹುಶಃ ಇದು ಚರ್ಚೆಗೆ ಬರುತ್ತದೆ. ಆಗ ನಮ್ಮ ಅಭಿಪ್ರಾಯವನ್ನು

ವ್ಯಕ್ತ ಮಾಡುವುದಕ್ಕೆ ಅವಕಾಶವಾಗುತ್ತದೆ. ಮುಂದೆ ಯಾವ ರೀತಿಯಿಂದ ಕಾರ್ಯಕ್ರಮ ತೆಗೆದು ಕೊಳ್ಳಲಾಗುತ್ತದೆ ಎನ್ನುವುದರ ಬಗ್ಗೆ ಈಗಲೇ ಹೇಳುವುದು ಕಷ್ಟವಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಇತ್ತೀಚೆಗೆ ನಡೆದಂಥ ಮುಖ್ಯ ಮಂತ್ರಿಗಳ ಸಭೆಯಲ್ಲಿ ನಂಬೂದಿರಿಪಾಡ್, ಮತ್ತು ಅಜಯ ಘೋಷ್ ಬಂದಿದ್ದರೇ? ಅಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಂಬಂಧ ಹೇಗೆ ಇರಬೇಕು ಎನ್ನುವ ವಿಷಯವನ್ನು ಪ್ರಸ್ತಾಪ ಮಾಡಿದರೇ ಎನ್ನುವುದನ್ನು ಹೇಳುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ನನಗೆ ಗೊತ್ತಿದ್ದ ಹಾಗೆ ಮುಖ್ಯ ಮಂತ್ರಿಗಳ ಸಭೆ ಇತ್ತೀಚೆಗೆ ಆಗಿಲ್ಲ. ಯಾವುದಾದರೂ ಆಗಿದ್ದರೆ ಕೇಂದ್ರ ಸರ್ಕಾರ ಕರೆದಿದ್ದರೆ ನಾನೂ ಹೋಗುತ್ತಿದ್ದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಕೇಂದ್ರ ಸರ್ಕಾರದವರು ನಮಗೆ ಕೊಡತಕ್ಕ ಸಹಾಯ ಧನ ಬಹಳ ಕಡಿಮೆಯಾಗಿರುವುದರಿಂದ ಅದನ್ನು ಹೆಚ್ಚು ಮಾಡಲಿಕ್ಕೆ ಏನಾದರೂ ಉಪಾಯವನ್ನು ಹುಡುಕಿದ್ದೀರಾ?

ಶ್ರೀ ವೀರೇಂದ್ರ ಪಾಟೀಲ್.—ಏನೂ ಉಪಾಯವಿಲ್ಲ. ಪ್ಲಾನ್ ಫೈನಲೈಸ್ ಮಾಡಿಲ್ಲ. ಪ್ಲಾನ್ ಫೈನಲೈಸ್ ಆದಮೇಲೆ ಕೇಂದ್ರದ ಸಹಾಯ ಯಾವರೀತಿ ಸಿಕ್ಕಬಹುದು, ಎಷ್ಟು ಪ್ರಮಾಣದಲ್ಲಿ ಸಿಕ್ಕಬೇಕು, ಎಷ್ಟು ಪ್ರಮಾಣದಲ್ಲಿ ಹಂಚಬೇಕು, ಅದಕ್ಕೆ ಯಾವ ಗೈಡ್ ಲೈನ್ಸ್ ಇರಬೇಕು ಎಂದು ಪ್ಲಾನಿಂಗ್ ಕಮಿಷನ್‌ನವರು ನಮ್ಮ ಹತ್ತಿರ ಚರ್ಚೆ ಮಾಡಿದ್ದಾರೆ. ಅದರ ಪ್ರಕಾರ ಸೆಂಟ್ರಲ್ ಅಸಿಸ್ಟೆನ್ಸ್ ಪ್ರತಿಯೊಂದು ರಾಜ್ಯಕ್ಕೂ ಹಂಚುವುದಕ್ಕೆ ಅವರು ಪ್ರಯತ್ನ ಮಾಡುತ್ತಾರೆ.

ಶ್ರೀ ಎಲ್. ಶ್ರೀಕಂಠಯ್ಯ.—ಬಂಗಾಳ, ಮದ್ರಾಸ್ ಮತ್ತು ಕೇರಳ ರಾಜ್ಯಗಳ ಮುಖ್ಯ ಮಂತ್ರಿಗಳು ಒಂದು ಸಮಿತಿ ಬೇಕು ಎಂದು ಕೇಳಿದ್ದಾರೆ. ನಮ್ಮ ಮುಖ್ಯ ಮಂತ್ರಿಯವರು ಅಂಥ ಕಮಿಟಿಯನ್ನು ರಚಿಸುವಂಥ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ. ಕೇಂದ್ರ ಮತ್ತು ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿರುವುದರಿಂದ ಆ ರೀತಿ ಕೇಳುವುದು ಸರಿಯಾಗಿಲ್ಲ ಎಂದು ಹೇಳುತ್ತಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಆವಶ್ಯಕತೆ ಇಲ್ಲ ಎಂದು ಹೇಳಿಲ್ಲ, ಆವಶ್ಯಕತೆ ಇದೆ ಎಂದೂ ಹೇಳಿಲ್ಲ. ಅದರ ಬಗ್ಗೆ ನಾನು ಅಭಿಪ್ರಾಯ ಕೊಟ್ಟಿಲ್ಲ. ಕೇಂದ್ರ ಸರ್ಕಾರ ಇದರ ನಿರ್ಣಯ ಮಾಡಿ ತಿಳಿಸಿಲ್ಲ ಎಂದು ಹೇಳಿದ್ದೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರ ನಮಗೆ ಕೊಡತಕ್ಕ ಸಹಾಯ ಬೇರೆ ರಾಜ್ಯಗಳಿಗಿಂತ ಕಡಮೆ ಎಂದು ಹೇಳಿದ್ದರು. ಅದರ ಬಗ್ಗೆ ಏನಾದರೂ ಕೇಂದ್ರಕ್ಕೆ ಹೇಳಿದ್ದಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಕೇಂದ್ರ ಸರ್ಕಾರದವರು ಎರಡನೇ ರಾಜ್ಯಗಳಿಗೆ ಹೆಚ್ಚಿನ ಸಹಾಯ ಮಾಡಿ ನಮ್ಮ ರಾಜ್ಯಕ್ಕೆ ಕಡಿಮೆ ಸಹಾಯ ಮಾಡಿದ್ದಾರೆ ಎಂದು ಹೇಳಿದ್ದೇನೆಯೇ ಇಲ್ಲವೇ ಎಂದು ತಿಳಿಸುವುದಕ್ಕೆ ಸ್ವಲ್ಪ ತೊಂದರೆಯಾಗುತ್ತದೆ. ಪಬ್ಲಿಕ್ ಸೆಕ್ಟಾರಿನಲ್ಲಿ ಕಳೆದ 16–17 ವರ್ಷಗಳಿಂದಲೂ ಕೇಂದ್ರ ಸರ್ಕಾರ ಏನು ಹಣವನ್ನು ಇನ್‌ವೆಸ್ಟ್ ಮಾಡಿದ್ದಾರೆ ಅದನ್ನು ಎಲ್ಲ ರೆಕ್ಕಕ್ಕೆ ತೆಗೆದುಕೊಂಡರೆ ನಮ್ಮ ರಾಜ್ಯದಲ್ಲಿ ಇನ್‌ವೆಸ್ಟ್ ಮಾಡಿರುವುದು ಕಡಮೆ ಎಂದು ಹೇಳಿದ್ದೇನೆ. ಇದನ್ನು ಕೇಂದ್ರದ ಗಮನಕ್ಕೂ ತಂದಿದ್ದೇವೆ, ಜನತೆಯ ಗಮನಕ್ಕೂ ತಂದಿದ್ದೇನೆ.

Sri B. B. SAYANAK.—May I know whether it is a fact that the Prime Minister of India is going to call a meeting of all the Chief Ministers in respect of this question of Centre-State relations?

Sri VEERENDRA PATIL.—As I have already said, I do not know, but I have also read in papers that this was discussed in the Standing Committee of the National Integration Council and it was agreed that a paper should be prepared and opportunity should be given to discuss this matter threadbare in the National Integration Council. I believe probably after the Parliament Session is over the National Integration Council meeting might be convened and an opportunity might be given to all the Chief Ministers to express their views.

Sri H. SIDDAVEERAPPA.—By this time it is known to all of us that the Centre has not been treating this State properly in the economic development and in various other development works. In order to strengthen the hands of the Government and also in order to safeguard the interests of the State, will Government be pleased to consider the setting up of a Committee consisting of members of both sides of the House more or less in the capacity of an Advisory Committee to help the Government to find out ways and means of strengthening the hands of the Government to fight for the cause of the State with the Cenntre?

Sri VEERENDRA PATIL.—It is too early for me to make any comment on the suggestion made by the hon. Member. I said just now it appears that an opportunity is going to be given to all the Chief Ministers to express their views in the National Integration Council. I have also heard that the National Integration Council meeting is going to be convened sometime after the Parliament Session is over. We do not know what is working in the mind of the Government of India. We must know how things are going to develop. If there is anything that we have to do at the State level then the State Government will certainly consider, but it is too early to say anything at this stage.

ಶ್ರೀ ಎಸ್. ಗೋಪಾಲಗೌಡ.— ರಾಜ್ಯದಲ್ಲಿ, ರಾಷ್ಟ್ರದಲ್ಲಿ ಹೇಗೆ ರಚಿಸಿದ್ದಾರೋ ಹಾಗೆ ತಾವು ಒಂದು ನ್ಯಾಷನಲ್ ಇಂಟೆಗ್ರೇಷನ್ ಕೌನ್ಸಿಲ್ಲೋ ಏನೋ ಮಾಡಿದ್ದೀರಿ. ಇದು ರಾಜ್ಯಗಳಿಗೆ ಪ್ರತ್ಯೇಕವಾಗಿ ಬಗೆಹರಿಸಲಾರದ ಪ್ರಶ್ನೆಯಾಗಿರುವುದರಿಂದ, ಈ ಸಮಿತಿಗೂ ಮತ್ತು ಜೀರೆ ರಾಜ್ಯಗಳಲ್ಲಿ ರಚಿಸುವ ಸಮಿತಿಗೂ ಸಂಬಂಧವಿದ್ದರೆ ಇಲ್ಲಿ ಮಾಡಿದ ನಲಹೆಯನ್ನು ಅವರಿಗೆ ತಿಳಿಸುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಸ್ಟೇಟ್ ಕೌನ್ಸಿಲ್ ಪ್ರಶ್ನೆ ಬೇರೆ. ಆದರೆ ಈಗ ಮಾನ್ಯ ಸದಸ್ಯರು ಕೇಳುವುದು ಕೇಂದ್ರ ಹಾಗೂ ರಾಜ್ಯಗಳ ಸಂಬಂಧಗಳನ್ನು ಪರಿಶೀಲಿಸಲು ಒಂದು ಸಮಿತಿ ಆಗಬೇಕೆಂಬುದು. ಕೇಂದ್ರ ಸರಕಾರ ಸಮಿತಿ ರಚಿಸಬೇಕೆಂಬ ಅಭಿಪ್ರಾಯ ಪಟ್ಟದೆಯೇ ಹೇಗೆ ಎಂಬುದನ್ನು ಹೇಳುವುದು ಕಷ್ಟ. ಹಾಗೆ ಅಭಿಪ್ರಾಯ ಕೊಡಬೇಕಾದರೆ ಎಲ್ಲಾ ಮುಖ್ಯ ಮಂತ್ರಿಗಳೊಡನೆ ಚರ್ಚೆ ಮಾಡಿ ಒಂದು ನಿರ್ಣಯ ತೆಗೆದುಕೊಳ್ಳಬೇಕು. ಒಂದುವೇಳೆ ಸಮಿತಿ ಮಾಡಬೇಕೆಂದು ಹೇಳಿದರೆ ಆಗ ನಾವೇನು ಮಾಡಬೇಕೆಂಬುದನ್ನು ಪರಿಶೀಲಿಸಬೇಕಾಗುವುದು.

ಶ್ರೀ ಎಸ್. ಗೋಪಾಲಗೌಡ.—ಈಗಾಗಲೇ ರಾಜ್ಯದಲ್ಲಿ ರಾಷ್ಟ್ರೀಯ ಏಕ್ಯತಾ ಸಮಿತಿ ಒಂದನ್ನು ಮಾಡಿದ್ದೀರಿ. ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಇದಿದೆ. ಇದರಿಂದ ಕೇಂದ್ರ ಮತ್ತು ರಾಜ್ಯಗಳ ಸಂಬಂಧದಲ್ಲಿ ಸಮಿತಿಯಿದ್ದಂತಾಯಿತು. ಪ್ರಶ್ನೆಯಲ್ಲಿ ಕೇಳಿರುವಂತೆ ಸಮಿತಿ ಮಾಡಬೇಕಾದರೆ ಯಾವ ರೀತಿ ಕೋಆರ್ಡಿನೇಟ್ ಮಾಡಬೇಕೆಂಬ ಬಗ್ಗೆ ಕಾರ್ಯಕ್ರಮ ಹಾಕಿದ್ದೀರಾ?

ಶ್ರೀ ವೀರೇಂದ್ರ ಪಾಟೀಲ್.—ಸ್ಟೇಟ್ ರೆವರ್ ಇಂಟೆಗ್ರೇಷನ್ ಕೌನ್ಸಿಲ್ ಅಥವಾ ಕಮಿಟಿ ಬಹುಶಃ ನ್ಯಾಷನರ್ ಇಂಟೆಗ್ರೇಷನ್ ಕೌನ್ಸಿಲ್‌ನಲ್ಲಿ ಅನೇಕ ಸಲಹೆ ಮತ್ತು ನಿರ್ಣಯ ಮಾಡುವುದಿದೆ. ಕೆಲವು ನಿರ್ಣಯ ಕೇಂದ್ರ ಸರಕಾರ ತನ್ನ ಮಟ್ಟದಲ್ಲಿ ಮಾಡಬೇಕು, ಕೆಲವು ರಾಜ್ಯ ಸರಕಾರಗಳು ಜಾರಿಗೆ ತರಬೇಕು. ಅದನ್ನು ಸ್ಟೇಟ್‌ನಲ್ಲಿ ಮತ್ತು ನ್ಯಾಷನರ್ ಇಂಟೆಗ್ರೇಷನ್ ಕಮಿಟಿಯಲ್ಲಿ ರಿವ್ಯೂ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಕೇಂದ್ರ ಸರಕಾರ ಪಬ್ಲಿಕ್ ಸೆಕ್ಟಾರಿನಲ್ಲಿ ಹೂಡುವ ಹಣ ಬೇರೆ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ ಬಹಳ ಕಡಮೆ ಇದೆಯೆಂದು ತಿಳಿಸಿರುವುದಾಗಿ ಹೇಳಿದರು. ಇದರ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಅಥವ ಕೇಂದ್ರ ಸರಕಾರಕ್ಕೆ ಪತ್ರ ಬರೆದಿದ್ದೀರಾ? ಬರೆದಿದ್ದರೆ ಅದಕ್ಕೆ ಉತ್ತರ ಬಂದಿದೆಯೇ? ಮುಖ್ಯ ಮಂತ್ರಿಗಳ ಹಾಗೆ ಹಣಕಾಸಿನ ಸಚಿವರು ಸಹ ನಮ್ಮ ರಾಜ್ಯದಲ್ಲಿ ಪಬ್ಲಿಕ್ ಸೆಕ್ಟಾರ್‌ನಲ್ಲಿ ಕೇಂದ್ರ ಸರಕಾರ ಸಾಕಷ್ಟು ಹಣ ಹೂಡಿಲ್ಲ ಮತ್ತು ಸರಿಯಾದ ಕೇರು ಕೂಡ ಹಾಕಿಲ್ಲ ಎಂದು ಅನೇಕ ಬಾರಿ ಹೇಳಿದ್ದಾರೆ. ಈ ದೃಷ್ಟಿಯಿಂದ ಒಂದು ಕಮಿಟಿ ಮಾಡುವಂತೆ ಬರೆದು ಮುಂದಾದರೂ ಕೇಂದ್ರ ಸರಕಾರದ ಗಮನಕ್ಕೆ ಕುಂದುಕೊರತೆಗಳನ್ನು ತರಲು ಪ್ರಯತ್ನ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಪಬ್ಲಿಕ್ ಸೆಕ್ಟರ್‌ನಲ್ಲಿ ಕೇಂದ್ರ ಸರ್ಕಾರದವರು ಸಾಕಷ್ಟು ಇನ್‌ವೆಸ್ಟ್‌ಮೆಂಟ್ ಮೈಸೂರು ರಾಜ್ಯದಲ್ಲಿ ಮಾಡಿಲ್ಲ ಅನ್ನುವಂತಹದನ್ನು ಇಲ್ಲಿ ವಿಾಟಿಂಗ್‌ನಲ್ಲಿ ಹೇಳಿದ್ದೇನೆ, ಮತ್ತು ಇವರ ಬಗ್ಗೆ ಕೇಂದ್ರ ಸರಕಾರದ ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಪ್ರಧಾನ ಮಂತ್ರಿಗಳಿಗೂ ಬರೆದಿದ್ದೇನೆ. ಪತ್ರ ವ್ಯವಹಾರ ನಡೆಯುತ್ತಾ ಇದೆ. 4 ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಮಟ್ಟಿಗೆ ಕೇಂದ್ರ ಸರಕಾರದವರು ಪಬ್ಲಿಕ್ ಸೆಕ್ಟರ್‌ನಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡುತ್ತಾರೆ ಮತ್ತು ನೀತಿ ಏನಿರಬೇಕೆಂಬ ಪ್ರಶ್ನೆ ಇನ್ನೂ ಚರ್ಚೆಗೆ ಬರಬೇಕಾದ ಪ್ರಶ್ನೆ ಇದೆಯೇ ಹೊರತು ಅವರು ಅಂತಿಮವಾದ ನಿರ್ಣಯ ತೆಗೆದುಕೊಂಡಿಲ್ಲ. ನಾನು ಕೇಳಿದಂತೆ ಇದೇ ತಿಂಗಳು 18, 19, 20ನೇ ತಾರೀಖು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ವಿಾಟಿಂಗ್ ಆಗುತ್ತದೆ. ಅಲ್ಲಿ ಈ ಪಾಲಿಸಿ ಪ್ರಶ್ನೆ ಬರುತ್ತದೆ ಅದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ನಾನು ದೆಹಲಿಗೆ ಹೋದಾಗೆಲ್ಲ ಇದರ ಬಗ್ಗೆ ಪ್ರಧಾನ ಮಂತ್ರಿಗಳಿಗೆ, ಉಪಪ್ರಧಾನ ಮಂತ್ರಿಗಳಿಗೆ ಮತ್ತು ಇತರ ಸಂಬಂಧಪಟ್ಟವರಿಗೆಲ್ಲಾ ಹೇಳಿದ್ದೇನೆ ಮತ್ತು ಪತ್ರವ್ಯವಹಾರ ಮಾಡಿದ್ದೇನೆ. ಅದಕ್ಕಾಗಿ ಇದೆಲ್ಲಾ ಮಾಡುವುದಕ್ಕೆ ಒಂದು ಕಮಿಟಿ ಬೇಕು ಅಂತ ನನಗೆ ಅನಿಸುವುದಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಹೋದ ಪಂಚವಾರ್ಷಿಕ ಯೋಜನೆಯಲ್ಲಿ ತಮಗೆ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರದವರು 125 ಕೋಟಿ ರೂಪಾಯಿಗಳನ್ನು ಮದ್ರಾಸ್ ಸರ್ಕಾರಕ್ಕೆ ಕೈಗಾರಿಕಾ ಬೆಳವಣಿಗೆಗಾಗಿ ಕೊಟ್ಟರು. ನಮ್ಮ ರಾಜ್ಯಕ್ಕೆ ಕೇವಲ 9 ಕೋಟಿ ರೂಪಾಯಿ ಸಹ ಸಿಕ್ಕಲಿಲ್ಲ. ಈ ದೃಷ್ಟಿಯಿಂದ ನಮಗೆ ಎಷ್ಟು ಹಣ ನಲ್ಲಬೇಕೋ ಅಷ್ಟು ಹಣ ಒದಗಿಸಿಕೊಳ್ಳಲು ಒಂದು ಕಮಿಟಿ ಅತ್ಯಾವಶ್ಯವಾಗಿ ಬೇಕು ನಿಮ್ಮ ಹಸ್ತವನ್ನು ಬಲಪಡಿಸುವುದಕ್ಕೆ ಅಂತ ಹೇಳಿ ತಮಗೆ ಅರಿವಾಗಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಎರಡು ವಿಚಾರ ಇವೆ. ಒಂದು ಕೇಂದ್ರ ಸರ್ಕಾರದವರು ಪ್ಲಾನಿಂಗ್‌ಗಾಗಿ ನಮಗೆ ಸಹಾಯ ಮಾಡುತ್ತಾರೆ, ಅದು ಸೆಂಟ್ರಲ್ ಅಸಿಸ್ಟೆನ್ಸ್ ಅದನ್ನು ಅವರು ಕೆಲವು ಗೈಡ್‌ಲೈನ್ಸ್ ಹಾಕಿಕೊಂಡು—ಪಾಪ್ಯುಲೇಷನ್ ಬೇಸಿಸ್, ಏರಿಯಾ ಬೇಸಿಸ್, ಬ್ಯಾಕ್‌ವರ್ಡ್‌ನೆಸ್ ಮುಂತಾದ ಕೈೃಟೀರಿಯಾ ಏನು ಇವೆ, ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಚೀಫ್ ಮಿನಿಸ್ಟರುಗಳನ್ನು ಕೇಳಿ ಅದರ ಪ್ರಕಾರ ಹಂಚುತ್ತಾರೆ. ಇದು ಸ್ಟೇಟ್ ಪ್ಲಾನಿದು. ಸೆಂಟ್ರಲ್ ಪ್ಲಾನಿದು ಅವರ ಹತ್ತಿರ ದುಡ್ಡು ಇರುತ್ತದೆ, ಅವರು ಇನ್‌ವೆಸ್ಟ್‌ಮೆಂಟ್ ಮಾಡುವ ಮುಂಚೆ ಮಾನ್ಯ ಸದಸ್ಯರು ಹೇಳಿದ ಹಾಗೆ ಸೆಂಟ್ರಲ್ ಸೆಕ್ಟರ್ ಪ್ರಾಜೆಕ್ಟ್‌ಗಳು ಮದ್ರಾಸಿನಲ್ಲಿ ಹೆಚ್ಚಾಗಿ ಇರಬಹುದು, ನಮ್ಮಲ್ಲಿ ಇಲ್ಲ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಮೈಸೂರು ರಾಜ್ಯದಲ್ಲಿ ಸೆಂಟ್ರಲ್ ಸೆಕ್ಟರ್ ಇನ್‌ವೆಸ್ಟ್‌ಮೆಂಟು ಬಹಳ ಕಡಿಮೆ ಎಂಬ ವಿಚಾರ ಅವರ ಗಮನಕ್ಕೆ ತರುತ್ತಾ ಇದ್ದೇವೆ ಮತ್ತು ಪತ್ರವ್ಯವಹಾರ ಮಾಡುತ್ತಾ ಇದ್ದೇವೆ. ಎಷ್ಟು ಸಾಧ್ಯತೆ ಇದೆಯೋ ಅಷ್ಟೂ ಪ್ರಯತ್ನ ಮಾಡುತ್ತಾ ಇದ್ದೇವೆ.

ಅಧ್ಯಕ್ಷರು.—ಪ್ರಶ್ನೋತ್ತರಗಳ ವೇಳೆ ಮುಗಿಯಿತು.

QUESTIONS FOR ANSWERS ON THE DAY

(but not taken up)

Tour of Minister of State for Fisheries and Ports in Kolar District

376. **Sri P. VENKATAGIRIYAPPA** (Kolar).—

Will the Chief Minister be pleased to state :—

(*a*) the number of days the Minister of State for Fisheries and Ports visited Kolar District and Malur Taluk ;

(*b*) the amount actually spent on his tour ?